## ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಂಡರಗಿ

| | | | | |
|---|---|---|---|---|
| | ಓ ಎಸ್ ನಂ. 35/2020 | | | |
| | ವಾದಿ | 1 | ಪಿ.ಡಬ್ಲೂ: | 1 |
| | ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 08.07.2025 | | | |
| ಸಾಕ್ಷಿದಾರರ ಹೆಸರುಃ | ಮಹಾಲಿಂಗಪ್ಪ ಕೊಂಚಿಗೇರಿ | | | |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಎಮ್.ಎಸ್.ಬಿ. ಪ್ರತಿವಾದಿ ನಂ.3 ರವರ ಪರ ವಕೀಲರಿಂದಃ**

1. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ತಂದೆಯ ಹೆಸರು ಶಂಕ್ರಪ್ಪ. ನನ್ನ ತಂದೆಗೆ ನಾವು 3 ಜನ ಗಂಡು ಮತ್ತು 3 ಜನ ಹೆಣ್ಣು ಮಕ್ಕಳಿರುತ್ತೇವೆ. ಅವರು 1) ಗಿರಿಜಮ್ಮ, 2) ಅಂದಮ್ಮ, 3) ಗಂಗಮ್ಮ, 4) ಮಲ್ಲಪ್ಪ, 5) ಹೇಮಣ್ಣ ಹಾಗೂ ನಾನು ಇರುತ್ತೇವೆ. ಸದರಿ ಪೈಕಿ ಗಂಗಮ್ಮ ಮತ್ತು ಹೇಮಣ್ಣ ಮರಣ ಹೊಂದಿರುತ್ತಾರೆ. ಗಂಗಮ್ಮ ಇವರಿಗೆ ಒಬ್ಬ ಮಗ ಮತ್ತು ಒಬ್ಬಳು ಮಗಳು ಇರುತ್ತಾರೆ ಹಾಗೂ ಹೇಮಣ್ಣ ಇವರಿಗೆ 1) ಬಸವಣ್ಣೆಮ್ಮ, 2) ಶಿವನಂದವ್ವ, 3) ಭಾರತಿ, 4) ಸಾವಿತ್ರೆವ್ವ, 5) ಕವಿತಾ ಅಂತಾ 5 ಜನ ಹೆಣ್ಣು ಮಕ್ಕಳಿರುತ್ತಾರೆ. ಸದರಿಯವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

2. ನಾನು ಮತ್ತು ನನ್ನ ಸಹೋದರರು ಬೇರೆ ಬೇರೆಯಾಗಿ ವಾಸಿಸುತ್ತಿದ್ದರೂ, ವ್ಯವಹಾರವನ್ನು ಕೂಡಿ ಮಾಡುತ್ತಿದ್ದೆವು. ನಾವು 1982 ರಲ್ಲಿ ಪ್ರತ್ಯೇಕವಾಗಿ ಪಾಲು ವಿಭಾಗ ಮಾಡಿಕೊಂಡಿದ್ದೆವು. ಆಗಿನಿಂದ ನಾವು ಪ್ರತ್ಯೇಕವಾಗಿ ವ್ಯವಹಾರ ಮಾಡುತ್ತಿದ್ದೆವು ಎಂದರೆ ಸಾಕ್ಷಿಯು ನನ್ನ ಅಣ್ಣ ಮತ್ತು ತಮ್ಮನಿಗೆ ಅಷ್ಟೊಂದು ತಿಳುವಳಿಕೆ ಇರಲಿಲ್ಲ. ಆದ್ದರಿಂದ, ನಾನೇ ಎಲ್ಲ ವ್ಯವಹಾರ ಮಾಡುತ್ತಿದ್ದೆ ಅಂತಾ ನುಡಿಯುತ್ತಾರೆ. ಸದರಿಯವರು ಮಂದ ಬುದ್ದಿ ಹೊಂದಿದ್ದರ ಕುರಿತು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನನ್ನ ತಂದೆ ದಿಃ 09.08.1995 ರಂದು ಮರಣ ಹೊಂದಿದ್ದಾರೆ ಎಂದರೆ ಸರಿ. ನನ್ನ ತಂದೆ ಮರಣ ಹೊಂದುವ ಪೂರ್ವದಲ್ಲಿ ಪಾಲುವಾಟ್ನಿ ಮಾಡಿದ್ದರು ಎಂದರೆ ಸರಿ ಅಲ್ಲ.

3. ನನ್ನ ತಂದೆ ಮರಣ ಹೊಂದಿದ ನಂತರ, ನನಗೆ ಮತ್ತು ನನ್ನ ಸಹೋದರರಿಗೆ ತಲಾ 7 ಎಕರೆ ಚಿಲ್ಲರೆ ಆಸ್ತಿ ಬಂದಿದ್ದು, ಅದರ ಪೈಕಿ ಹೇಮಣ್ಣರವರಿಗೆ 5 ಎಕರೆ ಜಮೀನನ್ನು ಹೆಚ್ಚುವರಿಯಾಗಿ ನೀಡಿದ್ದೆವು. ಈ ರೀತಿಯಾಗಿ ಪಾಲನ್ನು ನನ್ನ ತಂದೆಯವರು ಮಾಡಿದ್ದರು. ದಾವಾ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸಾಕ್ಷಿಯು ಪಿತ್ರಾರ್ಜಿತ ಆಸ್ತಿ ಅಂತಾ ನುಡಿಯುತ್ತಾರೆ. ನನ್ನ ತಂದೆ ಅವರ ಜೀವಿತಾವಧಿಯಲ್ಲಿ ಪ್ರತಿವಾದಿ ನಂ.3 ರವರ ಮಠಕ್ಕೆ ದಾವಾ ಆಸ್ತಿಯನ್ನು ದಾನ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿ ನಂ.3 ರಿಂದ 5 ರವರು ಮಿಲಾಪಿಯಾಗಿ ಮಾಡಿಕೊಂಡಿರುತ್ತಾರೆ ಅಂತಾ ನುಡಿಯುತ್ತಾರೆ. ಈ ಕುರಿತು ನನ್ನ ತಂದೆ ತಮ್ಮ ಜೀವಿತಾವಧಿಯಲ್ಲಿ ಸಂಬಂಧಪಟ್ಟ ಯಾವ ನ್ಯಾಯಾಲಯ ಅಥವಾ ಕಛೇರಿಗಳಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಪಾಲುವಿಭಾಗವಾದ ಕುರಿತು ಯಾವುದೇ ಬರವಣಿಗೆಯಾಗಿಲ್ಲ. ಆದರೆ, ನನ್ನ ತಂದೆ ದಾವಾ

ಆಸ್ತಿ ತನ್ನ ಹೆಸರಿಗೆ ಇರಬೇಕು ಅಂತಾ ಇಟ್ಟುಕೊಂಡಿದ್ದರು. ನನ್ನ ತಂದೆ ಮರಣಾನಂತರ ದಾವಾ ಆಸ್ತಿಗಳ ಪಹಣಿ ಪತ್ರಿಕೆ ತೆಗೆಸಿ ನೋಡಲಾಗಿ, ನನ್ನ ತಂದೆಯ ಹೆಸರಿನಲ್ಲಿಯೇ ಇದ್ದವು. ಇದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 1970 ರಿಂದ ದಾವಾ ಆಸ್ತಿಗಳು ಪ್ರತಿವಾದಿ ನಂ.3 ರವರ ಹೆಸರಿನಲ್ಲಿವೆ ಎಂದರೆ ಸಾಕ್ಷಿಯು 1998-99 ರಲ್ಲಿ ನಮೂದಾಗಿವೆ ಅಂತಾ ನುಡಿಯುತ್ತಾರೆ. ಅಂದಿನಿಂದ ಸದರಿ ದಾವೆ ದಾಖಲಿಸುವ ದಿನದವರೆಗೂ ಸದರಿ ದಾನ ಪತ್ರದ ಕುರಿತು ನಾನು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ಸುಮಾರು 10 ವರ್ಷಗಳ ಕಾಲ ನನಗೆ ಡಂಬಳದ ನಾಡ ಕಛೇರಿಯವರು ದಾಖಲೆ ನೀಡಿರಲಿಲ್ಲ ಅಂತಾ ನುಡಿಯುತ್ತಾರೆ. ಮುಂದುವರೆದ ಸದರಿ ದಾಖಲೆಗಳು ಲಭ್ಯವಾಗದ ಕಾರಣ, ದಾವೆ ದಾಖಲಿಸಿರಲಿಲ್ಲ ಅಂತಾ ನುಡಿಯುತ್ತಾರೆ.

4. ಸದರಿ ದಾಖಲೆಗಳನ್ನು ಪಡೆಯಲು ಸಲ್ಲಿಸಿದ ಅರ್ಜಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಯಾವುದೇ ಅರ್ಜಿಯನ್ನು ಸಲ್ಲಿಸದೇ, ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

5. ನನ್ನ ತಂದೆಗೆ 1) ಶಂಕ್ರಪ್ಪ ಮತ್ತು 2) ಯಲ್ಲಮ್ಮ ಅಂತಾ ಸಹೋದರ-ಸಹೋದರಿಯರಿದ್ದರು. ದಾವಾ ಆಸ್ತಿಗಳ ಚೆಕ್ ಬಂದಿಯನ್ನು ನಾನು ಬರೆಸಿಲ್ಲ ಎಂದರೆ ಸರಿ. ರಿ ಸ ನಂ.548/5 ನನ್ನ ಮಗನಾದ ಶಿವಾನಂದರವರ ಹೆಸರಿಗೆ ಇದ್ದು, ಈಗ ನನಗೆ ತೋರಿಸಿದ ದಾಖಲೆ ಖಾತೆ ಉತಾರ ಇರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ, **ನಿಡಿ 1 ಅಂತಾ ಗುರುತಿಸಲಾಯಿತು.** ಸದರಿ ಆಸ್ತಿಯನ್ನು 2015-16 ನೇ ಸಾಲಿನಲ್ಲಿ ನನ್ನ ಮಗನ ಹೆಸರಿಗೆ ನಮೂದಿಸಿರುತ್ತೇನೆ.

6. ಈಗ ನನಗೆ ತೋರಿಸಿದ ದಾಖಲೆ ರಿ ಸ ನಂ.548/4 ರ ಖಾತೆ ಉತಾರ ಇದ್ದು, ಅದು ನನ್ನ ತಮ್ಮ ಹೇಮಣ್ಣ ಇವರ ಹೆಂಡತಿಯಾದ ಶ್ರೀದೇವಿಯ ಹೆಸರಿಗೆ ಇರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ, **ನಿಡಿ 2 ಅಂತಾ ಗುರುತಿಸಲಾಯಿತು.**

7. ಈಗ ನನಗೆ ತೋರಿಸಿದ ದಾಖಲೆ ರಿ ಸ ನಂ.548/3 ರ ಖಾತೆ ಉತಾರ ಇದ್ದು, ಅದು ನನ್ನ ಹೆಸರಿಗೆ ಇರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ, **ನಿಡಿ 3 ಅಂತಾ ಗುರುತಿಸಲಾಯಿತು.**

8. ಈಗ ನನಗೆ ತೋರಿಸಿದ ದಾಖಲೆ ರಿ ಸ ನಂ.548/6 ರ ಖಾತೆ ಉತಾರ ಇದ್ದು, ಅದು ನನ್ನ ಮಗನಾದ ಮಹಾಂತೇಶ ಇವರ ಹೆಸರಿಗೆ ಇರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ, **ನಿಡಿ 4 ಅಂತಾ ಗುರುತಿಸಲಾಯಿತು.**

9. ಸದರಿ ಆಸ್ತಿಗಳನ್ನು ನನ್ನ ಮಕ್ಕಳ ಹೆಸರಿಗೆ ದಾಖಲಿಸುವ ಕಾಲಕ್ಕೆ ದಾವಾ ಆಸ್ತಿ ಕುರಿತು ಏನಾದರೂ ವಿಚಾರ ಮಾಡಿದ್ದೀರಾ ಎಂದರೆ ಸಾಕ್ಷಿಯು ಅಸಮಂಜಸ ಉತ್ತರ ನೀಡಿರುತ್ತಾರೆ.

10. ಈಗ ನನಗೆ ತೋರಿಸಿದ ದಾಖಲೆಗಳು ರಿ ಸ ನಂ.548/2 ಮತ್ತು 548/1 ರ ಖಾತೆ ಉತಾರಗಳಿದ್ದು, ಅವು ನನ್ನ ಅಣ್ಣನಾದ 1 ನೇ ಪ್ರತಿವಾದಿ ಹೆಸರಿಗೆ ಇರುತ್ತವೆ. ಸದರಿ ದಾಖಲೆಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ, **ನಿಡಿ 5 ಮತ್ತು 6 ಅಂತಾ ಗುರುತಿಸಲಾಯಿತು.**

11. ಈಗ ನನಗೆ ತೋರಿಸಿದ ದಾಖಲೆ ಆಸ್ತಿ ಸಂಖ್ಯೆ 526 ರ ಮನೆಯ ಉತಾರ ಇದ್ದು , ಅದು ನನ್ನ ಮತ್ತು 1 ನೇ ಪ್ರತಿವಾದಿಯ ಹೆಸರಿಗೆ ಇರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ, **ನಿಡಿ 7 ಅಂತಾ ಗುರುತಿಸಲಾಯಿತು.**

12. ಈಗ ನನಗೆ ತೋರಿಸಿದ ದಾಖಲೆ ಆಸ್ತಿ ಸಂಖ್ಯೆ 611 ರ ಮನೆಯ ಉತಾರ ಇದ್ದು , ಅದು 1 ನೇ ಪ್ರತಿವಾದಿಯ ಹೆಸರಿಗೆ ಇರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ, **ನಿಡಿ 8 ಅಂತಾ ಗುರುತಿಸಲಾಯಿತು.**

13. ಸದರಿ ಆಸ್ತಿಗಳನ್ನು ಪ್ರತ್ಯೇಕವಾಗಿ ನಮ್ಮ ಹೆಸರಿಗೆ 1982 ರಲ್ಲಿ ದಾಖಲಿಸಿಕೊಂಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕೆಲವು ಆಸ್ತಿಗಳು ನನ್ನ ತಂದೆಯ ಹೆಸರಿಗೆ ಈಗಲೂ ಇದ್ದು , ಅವುಗಳಲ್ಲಿ ಪಾಲುವಾಟ್ನಿ ಮಾಡಿಲ್ಲ ಅಂತಾ ನುಡಿಯುತ್ತಾರೆ. ಸದರಿ ಆಸ್ತಿಗಳ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅಗತ್ಯವಿದ್ದರೆ ಹಾಜರಪಡಿಸುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ

ಮುಂಡರಗಿ.